190(364) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)

ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ)ರಾಜ್ಯದಲ್ಲಿರುವ ಪಶುಚಿಕಿತ್ಸಾ ಕೇಂದ್ರಗಳು ಎಷ್ಟು?

ಆ)ಅನೇಕ ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಲ್ಲೆ ಬಂದಿದೆಯೇ?

ಇ)ಪಶುಚಿಕಿತ್ಸಾ ಕೇಂದ್ರಕ್ಕೆ ಔಷಧಿಯನ್ನು ಒದಗಿಸಲು ಸರ್ಕಾರದ ಕೈಗೊಂಡಿರುವ ಕ್ರಮಗಳೇನು?

ಈ)ಲಾಳ ಹೊಡೆಯಲು ಆಧುನಕ ವಿಧಾನವನ್ನು ಅನುಸರಿಸಲು ಸರ್ಕಾರದ ಯೋಚಿಸಿದೆಯೇ?

ಶ್ರೀ ರೇವೋ ನಾಯಕ್ ಬೆಳಮಗಿ

ಅ) ರಾಜ್ಯದಲ್ಲಿ ಒಟ್ಟಾರೆ 3947 ಪಶುಚಿಕಿತ್ಸಾ ಕೇಂದ್ರಗಳಿವೆ ಅವುಗಳ ವಿವರ ಈ ಕೆಳಗಿನಂತಿವೆ

1 ಪಶು ಆಸ್ಪತ್ರೆ	345
2 ಪಶುಚಿಕಿತ್ಸಾಲಯಗಳು	1762
3 ಸಂಚಾರಿ ಪಶುಚಿಕಿತ್ಸಾಲಯಗಳು	174
4 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	1198
5 ಕೃತಕ ಗರ್ಭದಾರಣಾ ಕೇಂದ್ರ	400

6 ಪ್ರಧಾನ ಗ್ರಾಮೀಣಾಭಿವೃದ್ಧಿ ಯೋಜನೆ	06
7 ಪ್ರಾದೇಶಿಕ ಪ್ರಯೋಗಶಾಲೆ	03
8 ಇತರೆ	59
ಒಟ್ಟು	**3947**

ಆ)ಹೌದು 153 ಸಹಾಯಕ ನರ್ದೇಶಕರ ಮತ್ತು 993 ಪಶು ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುವುದರಿಂದ ಒಟ್ಟಾರೆ 1146 ಪಶುವೈದ್ಯರ ಕೊರತೆ ಇದೆ

ಇ)ರಾಜ್ಯದ ಎಲ್ಲಾ ಪಶುಚಿಕಿತ್ಸಾ ಕೇಂದ್ರಗಳಿಗೆ ಔಷಧಿ ಪೂರೈಕೆಗಾಗಿ ಒಟ್ಟಾರೆ 1817 157 ಲಕ್ಷಗಳ ಅನುದಾನ 2007–08ನೇ ಸಾಲಿಗೆ ಆಯವ್ಯಯದಲ್ಲಿ ನಿಗದಿಗೊಳಿಸಲಾಗಿದೆ ಇದರಲ್ಲಿ 784 32 ಲಕ್ಷಗಳು ಜಿಲ್ಲಾ ವಲಯದ ಮುಖಾಂತರ ಹಾಗೂ 1033 25 ಲಕ್ಷಗಳ ಅನುದಾನವು ರಾಜ್ಯ ವಲಯದ ಅಡಿಯಲ್ಲಿ ನಗದಿಯಾಗಿರುತ್ತದೆ

ಜಿಲ್ಲಾ ವಲಯದಲ್ಲಿ ನಗದಿಯಾದ ಅನುದಾನದಲ್ಲಿ ಆಯಾ ಜಿಲ್ಲೆಗೆ ಅವಶ್ಯಕವಾದ ಔಷಧಿಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಅನುಮೋದನೆ ಮೇಲೆ ಅವಶ್ಯಕತೆಗನುಗುಣವಾಗಿ ಸರಬರಾಜು ಮಾಡಲು ಸಂಬಂಧಪಟ್ಟ ಜಿಲ್ಲಾ ಉಪನರ್ದೇಶಕರು ಕ್ರಮವಹಿಸುವರು

ರಾಜ್ಯ ವಲಯದ ಅನುದಾನದಲ್ಲಿ 2003–04ನೇ ಸಾಲಿನ ದರಗುತ್ತಿಗೆಯು ಆಗಸ್ಟ್ –2007ರವರೆಗೆ ಚಾಲ್ತಿಯಲ್ಲಿದ್ದು,18 ರಖಂಗಳಿಗೆ ಸರಬರಾಜು ಆದೇಶ ನೀಡಿ ಎಲ್ಲಾ ಪಶುಚಿಕಿತ್ಸಾ ಕೇಂದ್ರಗಳಿಗೆ ಸರಬರಾಜು ಮಾಡಲು ಈಗಾಗಲೇ ಕ್ರಮವಹಿಸಲಾಗಿದೆ ಉಳಿಕೆ ರಖಂಗಳಿಗೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಜುಲೈ 2007ರ ಅಂತ್ಯಕ್ಕೆ ಪೂರ್ಣಗೊಳ್ಳಬಹುದಗಿದ್ದು, ಅತೀ ಶೀಘ್ರ ಇತರೆ ಔಷಧಿ ರಾಸಾಯನಿಕಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು

ಜಾನುವಾರುಗಳಲ್ಲಿ ಲಾಳ ಹೊಡೆಯಲು ಯಾವುದೇ ಆಧುನಿಕ ಪದ್ಧತಿ ಆವಿಷ್ಕಾರವಾಗದ ಕಾರಣ ಸಾಂಪ್ರದಾಯಿಕ ಪದ್ಧತಿಯೇ ಮುಂದುವರಿದಿದೆ

ಕರ್ನಾಟಕ ವಿಧಾನ ಸಭೆ

ಶುಕ್ರವಾರ 13ನೇ ಜುಲೈ 2007ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನ ಸಭೆ ಸಭಾಂಗಣದಲ್ಲಿ
ಬೆಳಿಗ್ಗೆ 9 30 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು/ಉಪಾಧ್ಯಕ್ಷರು ಶ್ರೀ ಕೃಷ್ಣ ರವರು
ಪೀಠವನ್ನು ಅಲಂಕರಿಸಿದ್ದರು

ಶ್ರೀ ಎ ಎಸ್ ಬಸವರಾಜು (ಅರಸೀಕೆರೆ) ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಮೀನುಗಾರಿಕೆ ಇಲಾಖೆಯ ವತಿಯಿಂದ ನಾಗರಾಜು ಎನ್ನುವವರು ಮೀನುಗಾರಿಕೆ ಸಹಾಯಕ ಅಧಿಕಾರಿ ಆಗಿದ್ದಾರೆ ಆ ಅದಿಕಾರಿ ಅರಸೀಕೆರೆ, ಬೇಲೂರು, ಅರಕಲಗೂಡು ತಾಲ್ಲೂಕುಗಳಿಗೆ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಇವರ ಜೊತೆಯಲ್ಲಿ ನಾಲ್ಕು ಜನ ಸಿಬ್ಬಂದಿವರ್ಗದವರು ಇದ್ದಾರೆ ಅವರು ಯಾರು ಕೂಡ ಕಚೇರಿಯಲ್ಲಿ ಇರುವುದಿಲ್ಲ ಇದಕ್ಕೆ ಕಾರಣವೆನೆಂದರೆ ಈ ಸಹಾಯಕ ಅದಿಕಾರಿಯು ಕಚೇರಿಯಲ್ಲಿ ಇರುವುದಿಲ್ಲ ನಾನು ಮನೆಗಳು ಕೊಟ್ಟಿರುವ ವಿಚಾರವಾಗಿ ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಸರ್ಕಾರದ ಉತ್ತರ 10 ಮನೆಗಳೆಂದು ಹೇಳಿದ್ದಾರೆ ನಾನು ಹೆಚ್ಚುವರಿಯಾಗಿ ಕೇಳಿದ್ದಾನೆ, ಅದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ ಇಲ್ಲಿ ಹೆಚ್ಚುವರಿಯಾಗಿ ಎಷ್ಟು ಕೊಟ್ಟಿದ್ದಾರೆಂಬುದು ಗೊತ್ತಿಲ್ಲ ಆದರೆ ಕಚೇರಿಯಲ್ಲಿ ಯಾರು ಇರುವುದಿಲ್ಲ, ಕಾರಣವೇನೆಂದರೆ, ಮಳೆ ಇಲ್ಲ, ಕೆರೆ ಕಟ್ಟೆಗಳಲ್ಲಿ ನೀರು ಇಲ್ಲ ನೀರು ಇಲ್ಲದೇ ಇರುವ ಜಾಗಗಳಲ್ಲಿ ಮೀನು ಇಲ್ಲ ಮೀನುಗಳಿಲ್ಲವೆಂದು ಕಚೇರಿಯಲ್ಲಿ ಸಿಬ್ಬಂದಿಗಳು ಯಾರು ಇರುವುದಿಲ್ಲ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು, ಹಾಗೂ ಇಲ್ಲಿ 10 ಮನೆಗಳು foundation ಆಗಿದೆ, ಅರ್ಧ ಗೋಡೆಗಳ ನರ್ಮಾಣವಾಗಿದೆ ಹಣ ಬಿಡುಗಡೆಯಾಗಿಲ್ಲ, ಹಣವನ್ನು ಅದಷ್ಟು ಬೇಗ ಬಿಡುಗಡೆ ಮಾಡಿ ಕೊಡಬೇಕೆಂದು ಕೇಳುತ್ತೇವೆ ಇನ್ನು ಹೆಚ್ಚುವರಿಯಾಗಿ ಎಷ್ಟು ಮನೆಗಳನ್ನು ಕೊಡುತ್ತೀರಾ? ಎಂಬ ಬಗ್ಗೆ ತಿಳಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೀದ್ದೇನೆ

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ, ನಮ್ಮಲ್ಲಿ ಅದಿಕಾರಿಗಳು ಕೊರತೆ ಇತ್ತು ಇತ್ತೀಚೆಗೆ 50 ಹೊಸ ಅದಿಕಾರಿಗಳನ್ನು Assistant Director Grade-2 ನೇಮಕ ಮಾಡಲಾಗಿದೆ ತಾವು ಹೇಳಿದ ಅಧಿಕಾರಿಯ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಈಗಾಗಲೇ 10 ಮನೆಗಳಲ್ಲಿ 9 ಮನೆಗಳು ಪ್ರಾರಂಭವಾಗಿದೆಯೆಂದು ನಮಗೆ ವರದಿ ಬಂದಿದೆ ಅದಕ್ಕೆ ಪ್ರಥಮ ಕಂತಿನ 10,000 ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ಆದೇಶ ಮಾಡಿದೆ ಇನ್ನು ಮಾನ್ಯ ಸದಸ್ಯರು ಹೆಚ್ಚಿನ ಮನೆಗಳನ್ನು ಕೇಳಿದ್ದಾರೆ ಈ ವರ್ಷದ ಬಿಡುಗಡೆಯಲ್ಲಿ ಹೆಚ್ಚಿನ ಮನೆಗಳನ್ನು ಕೊಡುವುದಕ್ಕ ಪ್ರಯತ್ನ ಮಾಡುತ್ತೇನೆ

ಒಬ್ಬ ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಮೀನುಗಾರಿಕೆ ಸಚಿವರನ್ನು ಕೇಳುವುದೇನೆಂದರೆ, ಪ್ರತಿ ವರ್ಷ ಮನೆಗಳನ್ನು ಕೊಡುವ ವಿಚಾರದಲ್ಲಿ ಸಮರ್ಪಕವಾಗಿ ಎಲ್ಲಾ ತಾಲ್ಲೂಕುಗಳಲ್ಲಿ ಕೊಡುವಂಥಾದ್ದು ಆಗುತ್ತಿಲ್ಲ ದಕ್ಷಿಣ ಕನ್ನಡ ಭಾಗದಲ್ಲಿ ಮಾತ್ರ ಮನೆಗಳನ್ನು ಹೆಚ್ಚಾಗಿ ಕೊಡುತ್ತಿದ್ದಾರೆ ದಯವಿಟ್ಟು ಎಲ್ಲಾ ತಾಲ್ಲೂಕಿಗಳಲ್ಲೂ ಮೀನು ಹಿಡಿಯುವವರು ಇದ್ದಾರೆ ಅವರಿಗೆ ಮನೆಗಳನ್ನು ಕೊಡಬೇಕು, ಮತ್ತೆ ಮೀನುಗಾರಿಕೆ ಇಲಾಖೆಯ ಎಲ್ಲೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಇಲ್ಲಿ ಅಧಿಕಾರಿ ಇದ್ದಾರೋ ಇಲ್ಲವೋ ಎಂಬುದು ಇಡೀ ತಾಲ್ಲೂಕಿಗೆ ಗೊತ್ತಾಗುತ್ತಿಲ್ಲ ದಯವಿಟ್ಟು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳತ್ತೇನೆ

ಶ್ರೀ ಕೆ ಅಭಯಚಂದ್ರ ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಮೀನುಗಾರಿಕಾ ಪ್ರದೇಶದಲ್ಲೆ ಹೆಚ್ಚು ಮನೆಗಳನ್ನು ಕೊಡಬೇಕು ಈ ವರ್ಷ ಕೊಡುವಾಗ, ಮೀನುಗಾರಿಕಾ ಪ್ರದೇಶಗಳಿಗೆ ಕಡಿಮೆ ಮನೆಗಳನ್ನು ಕೊಟ್ಟಿದ್ದಾರೆ, ಅದನ್ನು 50 ಮನೆಗಳನ್ನು ಕೊಡುವಂತೆ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ ಅಲ್ಲಿ ಮೀನುಗಾರಿಕೆ ಕಸುಬಾಗಿದ್ದು, ಅಲ್ಲಿ ನದಿಗೆ, ಸಮುದ್ರಗಳಿಗೆ ಹೋಗಿ, ಮೀನುಗಳನ್ನು ಹಿಡಿಯುವ ಜನರು ಇದ್ದಾರೆ ಅವರು ಬಹಳ ಕಷ್ಟದಲ್ಲಿ ವಾಸಿಸುವಂಥಾ ಜನರಾಗಿದ್ದಾರೆ ಅದುದರಿಂದ ಮೀನುಗಾರಿಕಾ ಇಲಾಖೆಯಿಂದ ಕೊಡುವ ಹೆಚ್ಚಿನ ಮನೆಗಳನ್ನು ಸಮುದ್ರ ಕಿನಾರೆಯಲ್ಲಿರುವಂಥಾ ಜನರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

(ಗೊಂದಲ)

ಅಧ್ಯಕ್ಷರು ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ ಎಲ್ಲಾ ಸಮಗ್ರವಾಗಿ ಹೇಳುತ್ತಾರೆ, ಎಲ್ಲಾ ಹಾಗೆ ಇದೆ, ಹೀಗೆ ಇದೆಯೆಂದು ಪ್ರಶ್ನೋತ್ತರ ವೇಳೆಯಲ್ಲಿ ಹೇಳುತ್ತಾರೆ

ಶ್ರೀ ಬಿ ನಾಗರಾಜು ಶೆಟ್ಟಿ ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ವರ್ಷ 2,660 ಮನೆಗಳನ್ನು ಹಂಚಲಾಗಿದೆ ಈ ಸರ್ಕಾರ ಬಂದ ಮೇಲೆ ಪ್ರಥಮ ಬಾರಿಗೆ, ಎಲ್ಲೆಲ್ಲಿ ಮೀನುಗಾರರು ಇದ್ದಾರೆ ಅದು ಮೂರು

ಮನೆಯಿಂದ ಹಿಡಿದು, ಈಗಾಗಲೇ ಹೇಳಿದ ಹಾಗೆ 25,30 ಮನೆಗಳನ್ನು ಕೂಡ ಕೊಟ್ಟಿದ್ದೇವೆ ಜನಸಂಖ್ಯೆ ಆಧಾರದ ಮೇಲೆ ಕೊಡಲಾಗಿದೆ

ಅಧ್ಯಕ್ಷರು ಮನೆ ಕೊಡುವುದೆಂದರೆ, ಕಟ್ಟಿ ಕೊಡುವುದು ಇಲ್ಲ, ಏನೂ ಇಲ್ಲ, ಆ ರೀತಿ ಇದೆ ಆದುದರಿಂದ ಕಟ್ಟಿಕೊಡುತ್ತಿದ್ದಾರೋ ಇಲ್ಲವೋ ಎಂಬ ಬಗ್ಗೆ surprise check ಮಾಡುತ್ತಿದ್ದೀರಾ?

ಶ್ರೀ ಬಿ ನಾಗರಾಜ ಶೆಟ್ಟಿ ಮಾಡುತ್ತಿದ್ದೇವೆ

ಅಧ್ಯಕ್ಷರು ಮಾಡುತ್ತಿದ್ದೀರಿ? ಇನ್ನೂ ಮಾಡಿಲ್ಲ

ಶ್ರೀ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ 10,000 ಮನೆಗಳ ಪ್ಲಾನ್ ಮಾಡಿತ್ತು ಕಳೆದ ಬಾರಿ 2,660 ಮನೆಗಳು, ಈ ವರ್ಷ 2,340 ಮನೆಗಳನ್ನು ಬಿಡುಗಡೆ ಮಾಡುತ್ತಿದ್ದೇವೆ ಆ ಪಟ್ಟಿ ಈಗ ಕೆಳಮಟ್ಟದಿಂದ ಪ್ರಾರಂಭವಾಗುತ್ತಿದೆ ಇದನ್ನು ಎಲ್ಲಾ ಶಾಸಕರುಗಳ ಗಮನಕ್ಕೂ ತರುತ್ತೀದ್ದೇವೆ ಮುಂದಿನ ದಿವಸಗಳಲ್ಲಿ ನಮ್ಮ ಯೋಜನೆ ಈ ಮತ್ಸಾಶ್ರಯ ಯೋಜನೆ ಎಂದು 40,000 ರೂಪಾಯಿಗಳಿಗೆ ನಾವು ಧರ್ಮಾರ್ಧವಾಗಿ ಮನೆಗಳನ್ನು ಕಟ್ಟಿ ಕೊಡುವಂಥಾ ವ್ಯವಸ್ಥೆಯಾಗಿದೆ ಅದಕ್ಕೆ ಶೇ 50 ರಷ್ಟು ಹಣ ಕೇಂದ್ರ ಸರ್ಕಾರದಿಂದ ಬರಬೇಕು ಕೇಂದ್ರ ಸರ್ಕಾರದವರು 20,000 ರೂಪಾಯಿಗಳು ಕೊಡಬೇಕು ರಾಜ್ಯ ಸರ್ಕಾರದಿಂದ 20,000 ರೂಪಾಯಿಗಳನ್ನು ಕೊಡಬೇಕು ಆದರೆ 5,000 ಮನೆಗಳು ಏನು ಇದೆ ಫಸ್ಟ್ ಮತ್ತು ಸೆಕೆಂಡ್ ಹಂತದ್ದು ಇದೆ

ಒಬ್ಬ ಸದಸ್ಯರು ಇವರು 5,000 ಮನೆಗಳನ್ನು ಯಾರಿಗೆ ಕೊಟ್ಟಿದ್ದಾರೆ? ಎಲ್ಲಿ ಕೊಟ್ಟಿದ್ದಾರೆ?

ಅಧ್ಯಕ್ಷರು ಮಾನ್ಯ ಮಂತ್ರಿಗಳು ಏನು ಹೇಳೂತ್ತಾರೋ ಹೇಳಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅದು ಅನುದಾನ

ಶ್ರೀ ಜೆ ಸಿ ಶ್ರೀ ರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಅದು ಅನುದಾನ, ಧಮಾರ್ಧ ಅಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಕತೆ ಹೇಳುತ್ತಿದ್ದಾರೆ, ಕೇಳಿ

ಅಧ್ಯಕ್ಷರು ದರ್ಮಾರ್ಧವೆಂದರೆ, ಮಾನ್ಯ ಸಚಿವರು ಮುಜರಾಯಿ ಸಚಿವರು, ದೇವರಿಗೆ ಧರ್ಮ ಎಂದು ಹೇಳಿ ಅಬ್ಯಾಸವಾಗಿದೆ ಅದಕ್ಕೆ ಹಾಗೆ ಹೇಳಿದ್ದಾರೆ

(ಗೊಂದಲ)

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅದ್ಯಕ್ಷರೆ, ಕೇಂದ್ರ ಸರ್ಕಾರದಿಂದ ನಮಗೆ ಇನ್ನು ಹೆಚ್ಚಿನ ಅನುದಾನ ಬಂದರೆ, ಇನ್ನು ಹೆಚ್ಚಿನ ಮನೆಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ

ಅಧ್ಯಕ್ಷರು ಆಯಿತು

ಪ್ರಶ್ನೆ 62(117)

ಮಾನ್ಯ ಸದಸ್ಯರು ಹಾಜರಿರಲ್ಲಿಲ್ಲ

ತೆಂಗಿನ ಬೆಳೆಗೆ ನುಸಿಪೀಡೆ ರೋಗ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 63 (550)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) ರಾಜ್ಯದ ಎಷ್ಟು ಪ್ರದೇಶಗಳಲ್ಲಿ ತೆಂಗಿಗೆ ನುಸಿ ಪೀಡೆ ರೋಗ ತಗುಲಿದೆ